೫. ಈ ಮೇಲಿನ ಸೂಚನೆಗಳನ್ನು ಹಾಗೂ ಇದರಲ್ಲಿ ನಿಗದಿಪಡಿಸಿದ ಕಾಲ ಸೂಚಿಯನ್ನು ಎಲ್ಲಾ ಆಯ್ಕೆ ಸಮಿತಿಗಳು ಹಾಗೂ ನೇಮಕಾತಿ ಪ್ರಾಧಿಕಾರಗಳು ತಪ್ಪದೇ ಪಾಲಿಸಬೇಕಾಗಿ ಈ ಮೂಲಕ ಕೋರಿದೆ. ಅಲ್ಲದೇ ಎಲ್ಲಾ ಇಲಾಖಾ ಮುಖ್ಯಸ್ಥರುಗಳು ಈ ಸೂಚನೆಗಳನ್ನು ತಮ್ಮ ಅಧೀನದಲ್ಲಿ ಬರುವ ನೇಮಕಾತಿ ಪ್ರಾಧಿಕಾರಗಳ ಗಮನಕ್ಕೆ ತರಬೇಕಾಗಿ ನಿರ್ದೇಶಿಸಲಾಗಿದೆ.

ಮೈಸೂರಿನಲ್ಲಿ ನಿರ್ಮಾಣವಾಗುತ್ತಿರುವ ಕ್ರೀಡಾಂಗಣದ ಬಗ್ಗೆ

೮೪ (೭೦) ಶ್ರೀಮತಿ ಮುಕ್ತರುನ್ನೀಸಾ ಬೇಗಂ (ನರಸಿಂಹರಾಜ).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ :—

ಅ) ಮೈಸೂರಿನಲ್ಲಿ ನಿರ್ಮಾಣವಾಗುತ್ತಿರುವ ಕ್ರೀಡಾಂಗಣದ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು ?

ಆ) ಈ ಕ್ರೀಡಾಂಗಣದ ಅಂದಾಜು ವೆಚ್ಚ ಎಷ್ಟು ? ಮತ್ತು ಇದುವರೆವಿಗೂ ಎಷ್ಟು ಹಣ ಖರ್ಚು ಮಾಡಲಾಗಿದೆ ?

ಇ) ಈ ಕ್ರೀಡಾಂಗಣವು ಕ್ರೀಡೆಗಳನ್ನು ನಡೆಸಲು ಯಾವಾಗ ಸಿದ್ಧವಾಗಲಿದೆ ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯಮಂತ್ರಿಗಳು).—

ಅ) ಮೈಸೂರು ನಗರದಲ್ಲಿ ಕಟ್ಟಲಾಗುತ್ತಿರುವ ಕ್ರೀಡಾಂಗಣವು ಶೀಘ್ರವಾಗಿ ಮುಗಿಸಲು ಸರ್ಕಾರವು ಇದುವರೆವಿಗೂ ೧೮.೫ ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದೆ. ಈ ಕ್ರೀಡಾಂಗಣಗಳನ್ನು ಆದಷ್ಟು ಬೇಗ ಮುಗಿಸಲು ಸರ್ಕಾರವು ಪ್ರಯತ್ನ ಮಾಡುತ್ತಿದೆ.

ಆ) ಈ ಕ್ರೀಡಾಂಗಣದ ಪರಿಷ್ಕೃತ ಅಂದಾಜು ವೆಚ್ಚ ೫೨,೦೦,೦೦೦-೦೦ ರೂಪಾಯಿಗಳಾಗಿದು ಇದುವರೆವಿಗೂ ೩೭.೫೫ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ.

ಇ) ಆದಷ್ಟು ಶೀಘ್ರವಾಗಿ ಕ್ರೀಡೆಗಳನ್ನು ನಡೆಸಲು ಕ್ರೀಡಾಂಗಣವನ್ನು ಸಿದ್ಧಗೊಳಿಸಲಾಗುವುದು.

ಅಧ್ಯಕ್ಷರು.—ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಪಟ್ಟಿಯನ್ನು ಸಭೆಯ ಮುಂದೆ ಇಡಲಾಗಿದೆ.

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಅಧ್ಯಕ್ಷರೆ, ನನ್ನ ೫೫ನೆಯ ಪ್ರಶ್ನೆ ಏನಾಗಿದೆ.

ಅಧ್ಯಕ್ಷರು.—ಅದು ಮುಂದೆ ಹೋಗಿದೆ.

ಶ್ರೀ ಕೆ.ಹೆಚ್ ಪಾಟೀಲ್.—ಮಾನ್ಯ ಅಧ್ಯಕ್ಷರೆ, ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳನ್ನು ಮೊದಲು ಪ್ರಿಂಟ್ ಮಾಡಿ ಕೊಡುತ್ತಿದ್ದರು. ಈಗ ಪ್ರಿಂಟ್ ಇಲ್ಲದೆ ಕೊಡುತ್ತಿದ್ದಾರೆ. ಆದ್ದರಿಂದ ಪ್ರಿಂಟ್ ಮಾಡಿ ಕೊಡುವುದು ಒಳ್ಳೆಯದು.

ಅಧ್ಯಕ್ಷರು.—ಸೈಕ್ಲೊಸ್ಟೈಲ್ ಮಾಡಿ ಕಳಿಸುತ್ತೇನೆ.

ಶ್ರೀ ಕೆ.ಹೆಚ್. ಪಾಟೀಲ್.—ಪ್ರಿಂಟ್ ಮಾಡಿ ಕೊಡುವುದು ಒಳ್ಳೆಯದು ಸದನದಲ್ಲಿ ಇರತಕ್ಕ ಎಲ್ಲರಿಗೂ ಕೊಡಬೇಕು.

ಅರ್ಜಿಗಳನ್ನು ಒಪ್ಪಿಸುವುದು

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಮಾನ್ಯ ಅಧ್ಯಕ್ಷರೆ, ನನ್ನ ಹೆಸರಿನ ಮುಂದೆ ಇರುವ ಎಲ್ಲಾ ಈ ಕೆಳಗಿನ ಅರ್ಜಿಗಳನ್ನು ಒಪ್ಪಿಸುತ್ತೇನೆ.

1. Construction of linK road near Sankeshwar on Karnataka Maharashtra border from Gadahinglaja Road towards North upto P.B. Road in Hukkeri Taluk, Belgaum District;

2. Completion of tank works in Ankola Village of Hukkeri Taluk, Belgaum District;

3. Enquiry into mal-administration in Alur K.M.V.V.U. society in Hukkeri Taluk, Belgaum District.

4. Construction of underground road near Kollapur Yaktranaka in Sankeshwar, Hukkeri Taluk, Belgaum District;

5. Delay in construction of buildings for primary School and Hospital under I.P.p Scheme in Prachhapura Village of Hukkeri Taluk, Belgaum District;

6. Immediate release of funds for construction of Temples in Kanagala Village of Hukkeri Taluk, Belgaum District to Mahadeva and Kalmeshwara Temple Trust;

7. Sanction of Integrated National Water Supply Scheme to Vellanki, Dondagatti and Kotta Village, of Hukkeri Taluk, Belgaum District; and

8. Construction of Bridges on Sankeshwar-Belgaum-Chikkodi Road in Hukkeri Taluk.

ಅಧ್ಯಕ್ಷರು.—ಆರ್ಜಿಗಳನ್ನು ಒಪ್ಪಿಸಲಾಯಿತು. ಈಗ ಗಮನ ಸೆಳೆಯುವ ಸೂಚನೆ. ಮೊದಲನೆಯದು ದೊಡ್ಡಮೇಟಿಯವರ ಗಮನ ಸೆಳೆಯುವ ಸೂಚನೆ. ಮಾನ್ಯ ವಿದ್ಯುತ್ ಮಂತ್ರಿಗಳಿಲ್ಲ. ಎರಡನೆಯದು ಸ್ವಾಮಿರಾವ್ ಅವರದು ಕಂದಾಯ ಮಂತ್ರಿಗಳಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಸಂಬಂಧಪಟ್ಟ ಮಂತ್ರಿಗಳು ತಕ್ಷಣ ಬರತಕ್ಕಂಥಾದು ಅವರ ಕರ್ತವ್ಯ ಅದು ಬಿಟ್ಟು ಅವರಿಗೋಸ್ಕರ ಕಾಯುವುದು ಸರಿಯಲ್ಲ. ಟೈಂ ಪ್ರಕಾರ ಬರಬೇಕು.

ಶ್ರೀ ಬಿ. ಸ್ವಾಮಿರಾವ್.—ಪದೇ ಪದೇ ಈ ಬಗ್ಗೆ ನಾವು ಹೇಳುತ್ತಾ ಇದ್ದೇವೆ.

ಅಧ್ಯಕ್ಷರು.—ನಿಮ್ಮ ಉಪನಾಯಕರು ಹೇಳುತ್ತಾ ಇದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಬೇರೆಯವರಿಗೆ ಒಪ್ಪಿಸಿ ಹೋಗಬೇಕು. ಇಲ್ಲಾ ಅವರು ಹಾಜರಿರಬೇಕು.

ಶ್ರೀ ಬಿ. ರಾಚಯ್ಯ.—ಮೇಲ್ಮನೆಯಲ್ಲಿ ಅವರಿಗೆ ಕೆಲಸ ಇರುವುದರಿಂದ ಅಲ್ಲಿ ಹೋಗಿದ್ದಾರೆ, ಬರುತ್ತಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ನೀವು ಈ ರೀತಿ ಡಿಫೆಂಡ್ ಮಾಡಬೇಡಿ. ಅವರ ಕಾಲಿಂಗ್ ಅಟೆನ್‌ಷನ್ ಇದೆ. ಅವರು ಹೊರಗಡೆ ಕಾಫಿ ಕುಡಿದುಕೊಂಡು ಕುಳಿತಿರಬೇಕು.

ಅಧ್ಯಕ್ಷರು.—ನೀವು ಮಂತ್ರಿಯಾಗಿದ್ದಾಗ, ನಾವು ಮಂತ್ರಿಯಾಗಿದ್ದಾಗ ಹೀಗೆ ಮಾಡುತ್ತಿದ್ದೆವೋ

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ನಮ್ಮ ಕಾಲಿಂಗ್ ಅಟೆನ್‌ಷನ್ ಇದ್ದರೆ ನಾವು ಇರುತ್ತಿದ್ದೆವು. ಈ ರೀತಿ ಹೋಗುತ್ತಾ ಇರಲಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಒಂದು ಗಂಟೆ ಕಾಲದಲ್ಲಿ ಪ್ರಶ್ನೋತ್ತರ ಮುಗಿಯಬೇಕಾದ್ದು ಎರಡು ಎರಡೂವರೆ ಗಂಟೆಗೆ ಮುಗಿಯುತ್ತದೆ ಅಂದರೆ ಕಷ್ಟವಾಗುತ್ತದೆ.

ಶ್ರೀ ಎಂ.ಪಿ. ಪ್ರಕಾಶ್.—ಯಾವ ಪೈಲಿಗೆ ಉತ್ತರ ಬರಬೇಕೊ ಆ ಪೈಲಿನಲ್ಲಿ ಮಂತ್ರಿಗಳು ಇಲ್ಲದೇ ಹೋದರೆ ಉತ್ತರ ಹೇಗೆ ಬರುತ್ತದೆ. ನಮ್ಮದು ಕಾಲಿಂಗ್ ಅಟೆನ್‌ಷನ್ ಇತ್ತು, ಸಂಜೆಯಾದರೂ ಮಾಡಿಸಿ.